ಬೆಂಗಳೂರು ಡಿವೀಜ್ಞ ಡಿಸ್ಟ್ರಿಕ್ಟ್ಟ ಜಡ್ಜ್ಜರವರ ಕೋರ್ಟಿನಲ್ಲಿ.

ಸ್ರ 1901—1905ನೆ ಇಸವಿ ಮಿ॥ ಅರ್ಜೀ ನಂಬರ 104.

ಮೃತಪಟ್ಟ ಸಿ. ಶಾಮರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಸಿ. ರಂಗರಾಯರು, ಮೃತಪಟ್ಟ ಸದರೀ ಸಿ. ಶಾಮರಾಯರಿಗೆ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಫ್ರೆಂಚ್‌ರಾಕ್ಸ್ ಸ್ಥಳದ ವಾಸಸ್ಥರಾಗಿ ಮೃತಪಟ್ಟ ಸಿ. ಶಾಮರಾಯರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ ಮಾಡುವ ದಕ್ಕೆ ಸ್ರ 1901ನೆ ಇಸವಿ 7ನೆ ರೆಗ್ಯುಲೇಷ್ಣ ಪ್ರಕಾರ ಸರಟಿಫಿಕೇಟ ಬ್ಯಾ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಸಿ. ರಂಗರಾಯರ ಅರ್ಜಿಯನ್ನು ಸ್ರ 1904ನೆ ಇಸವಿ ಡಿಸೆಂಬರ ತಿಂಗಳು ತಾರೀಖು 1ರಲ್ಲು ಕೇಳಿ ಸರ್ಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನು ವಿವರ್ಜಿ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸಿ. ಶಾಮರಾಯರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ರ 1904ನೆ ಇಸವಿ ಅಕ್ಟೋಬರ ತಿಂಗಳು 13ನೆ ತಾರೀಖಿನಲ್ಲಿ ಕೋರ್ಟು ಪೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ರ 1904—1905ನೆ ಇಸವಿ ಮಿ॥ ಅರ್ಜೀ ನಂಬರ 105.

ಮೃತಪಟ್ಟ ಮುದ್ದಮಲ್ಲಪ್ಪನವರ ಆಸ್ತೀ ವಿಷಯದಲ್ಲಿ —

ಅರ್ಜೀದಾರರು ಮುರಡಯ್ಯ ಮೈನರ್, ಗಾರ್ಡಿಯರ್ ರಾಘವಯಾಣಮ್ಮ, ಮೃತಪಟ್ಟ ಸದರೀ ಮುದ್ದಮಲ್ಲಪ್ಪನವರಿಗೆ ಮೈನರ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಚನ್ನಪಟ್ಟಣದ ಕಸಬಾದಲ್ಲಿ ವಾಸವಾಗಿದ್ದು ಕೊಳ್ಳೇಗಾಲದ ವಾಸಸ್ಥರಾಗಿ ಮೃತಪಟ್ಟ ಮುದ್ದಮಲ್ಲಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ ಮಾಡುವದಕ್ಕೆ ಸ್ರ 1901ನೆ ಇಸವಿ 7ನೆ ರೆಗ್ಯುಲೇಷ್ಣ ಪ್ರಕಾರ ಸರ್ಟಿಫಿಕೇಟ ಬ್ಯಾ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರಿ ದರಖಾಸ್ತುದಾರರಾದ ಮುರಡಯ್ಯ ಮೈನರ್, ಗಾರ್ಡಿಯರ್ ರಾಘವಯಾಣಮ್ಮ ಎಂಬವರ ಅರ್ಜಿಯನ್ನು ಸ್ರ 1904ನೆ ಇಸವಿ ಡಿಸೆಂಬರ ತಿಂಗಳು ತಾರೀಖು (1) ಒಂದರಲ್ಲು ಕೇಳಿ ಸರ್ಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನ ವಿವರ್ಜಿ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರಿ ಮೃತಪಟ್ಟ ಮುದ್ದಮಲ್ಲಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರು ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ರ 1904ನೆ ಇಸವಿ ಅಕ್ಟೋಬರ 13ನೆ ತಾರೀಖಿನಲ್ಲಿ ಕೋರ್ಟು ಪೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ರ 1904—1905ನೆ ಇಸವಿ ಮಿ॥ ಅರ್ಜೀ ನಂಬರ 112.

ಮೃತಪಟ್ಟ ಮುತ್ಯಾ ಶ್ರೀನಿವಾಸಾಚಾರ್ಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಬೆಂಗಳೂರು ಸಿದ್ದಿಕಟ್ಟೆಯಲ್ಲಿರುವ ಕ್ಯಾಮಾಚಾರ್ಯರು, ಮೃತಪಟ್ಟ ಸದರೀ ಮುತ್ಯಾ ಶ್ರೀನಿವಾಸಾಚಾರ್ಯರಿಗೆ ಮುಖ್ಯ ವಾರಸದಾರರು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ಮುತ್ಯಾ ಶ್ರೀನಿವಾಸಾಚಾರ್ಯರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ ಮಾಡುವದಕ್ಕೆ ಸ್ರ 1901ನೆ ಇಸವಿ 7ನೆ ರೆಗ್ಯುಲೇಷ್ಣ ಪ್ರಕಾರ ಸರ್ಟಿಫಿಕೇಟ ಬ್ಯಾ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಕಾಮಾಚಾರ್ಯರ ಅರ್ಜಿಯನ್ನು ಸ್ರ 1904ನೆ ಇಸವಿ ಡಿಸೆಂಬರು ತಿಂಗಳು ತಾರೀಖು 1ರಲ್ಲು ಕೇಳಿ ಸರ್ಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನ ವಿವರ್ಜಿ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮುತ್ಯಾ ಶ್ರೀನಿವಾಸಾಚಾರ್ಯರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ರ 1904ನೆ ಇಸವಿ ಅಕ್ಟೋಬರ ತಿಂಗಳು 21ನೆ ತಾರೀಖಿನಲ್ಲಿ ಕೋರ್ಟು ಪೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ರ 1904—1905ನೆ ಇಸವಿ ಮಿ॥ ಅರ್ಜೀ ನಂಬರ 116.

ಮೃತಪಟ್ಟ ವೆಂಕಟಾಚಾರ್ಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಪಾವಗಡದಲ್ಲಿರುವ ವೆಂಕಟಾಚಾರ್ಯರ ಹೆಂಡತಿ ಮಂಗಮ್ಮನು, ಮೃತಪಟ್ಟ ಸದರೀ ವೆಂಕಟಾಚಾರ್ಯರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ತಾಲ್ಲೂಕು ಕೋರಮಂಗಲದ ವಾಸಸ್ಥರಾಗಿ ಮೃತಪಟ್ಟ ವೆಂಕಟಾಚಾರ್ಯರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸ್ರ 1901ನೆ ಇಸವಿ 7ನೆ ರೆಗ್ಯುಲೇಷ್ಣ ಪ್ರಕಾರ ಸರಟಿಫಿಕೇಟ್ ಬ್ಯಾ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮಂಗಮ್ಮನ ಅರ್ಜಿಯನ್ನು ಸ್ರ 1904ನೆ ಇಸವಿ ಡಿಸೆಂಬರ ತಿಂಗಳು ತಾರೀಖು 1ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿವರ್ಜಿ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟಾಚಾರ್ಯರ ಆಸ್ತಿಗೆ ಹಕ್ಕುದಾರರಾದ ನಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ರ 1904ನೆ ಇಸವಿ ಅಕ್ಟೋಬರ ತಿಂಗಳು 21ನೆ ತಾರೀಖಿನಲ್ಲಿ ಕೋರ್ಟು ಪೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1203

ಸ॥ 1904—1905ನೆ ಇಸವಿ ಮಿ॥ ಅರ್ಜೀ ನಂಬರ್ 118.

ಮೃತಪಟ್ಟ ಆಗಸ್ಟ್ಯೆ ರುದ್ರಪ್ಪಸೆಟ್ಟರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ಕಬ್ಬನಪೇಟೆಯಲ್ಲಿರುವ ಆಗಸ್ಟ್ಯೆ ರುದ್ರಪ್ಪಸೆಟ್ಟರ ಹೆಂಡತಿ ಶಾಂತಮ್ಮ ಉರುಫ್ ರಂಗಮ್ಮ, ಮೃತಪಟ್ಟ ಸದರೀ ಆಗಸ್ಟ್ಯೆ ರುದ್ರಪ್ಪಸೆಟ್ಟರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿಮೇಲೆ ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ಆಗಸ್ಟ್ಯೆ ರುದ್ರಪ್ಪಸೆಟ್ಟರ ಜೀಂದಿಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸ॥ 1901ನೆ ಇಸವಿ 7ನೆ ರೆಗ್ಯುಲೇಷನ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಶಾಂತಮ್ಮ ಉರುಫ್ ರಂಗಮ್ಮನ ಅರ್ಜಿಯನ್ನು ಸ॥ 1904ನೆ ಇಸವಿ ಡಿಸೆಂಬರ್ ತಿಂಗಳು ತಾರೀಖು 1ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆದುನ್ನು ವಿವರ್ಸೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಆಗಸ್ಟ್ಯೆ ರುದ್ರಪ್ಪಸೆಟ್ಟರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ॥ 1901ನೆ ಇಸವಿ ಅಕ್ಟೋಬರ್ ತಿಂಗಳು 21ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನನ್ನು ದಸ್ತಖತ್ತೊಡನೆ ಕೊಡೋ ಹಾಗಿದೆ.

ಎಸ್. ಆರ್. ಸುಬ್ರಾಯ ಅಯ್ಯರ್,
ಡಿಸ್ಟ್ರಿಕ್ಟ್ ಜಡ್ಜ್.

ಶಿವಮೊಗ್ಗ ಡಿಸ್ಟ್ರಿಕ್ಟ್ ಜಡ್ಜ್‌ರವರ ಕೋರ್ಟಿನಲ್ಲಿ.

ಸ॥1904—1905ನೆ ಇಸವಿ ಮಿ॥ ಅರ್ಜೀ ನಂಬರ್ 88.

ಶಿವಮೊಗ್ಗೆಯಲ್ಲಿ ಇದ್ದು ಮೃತಪಟ್ಟ ಕಾವುಸವುದ್ರದ ಕೃಷ್ಣಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು 1ನೆ ಶ್ಯಾಮಂಣ, 2ನೆ ಗುಂಡಪ್ಪ, 3ನೆ ಸೂರಪ್ಪ ಬಿ॥ ಕೃಷ್ಣಪ್ಪನ ವೈಶ್ಯರ್, ಗಾರ್ಡಿಯರ್ ತಾಯಿ ನಾಗಮ್ಮ, ಮೃತಪಟ್ಟ ಸದರೀ ಕೃಷ್ಣಪ್ಪನವರಿಗೆ 1-2-3ನೆ ಅರ್ಜೀದಾರ್ರು ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಶಿವಮೊಗ್ಗ ಸ್ಥಳದ 1-2-3ನೆ ಯವರು ಶಿವಮೊಗ್ಗ ವಾಸಸ್ಥರಾಗಿ ಮೃತಪಟ್ಟ ಕೃಷ್ಣಪ್ಪನವರ ಜೀಂದಿಗಿ ಬಗ್ಯಾಗಿ ಬರತಕ್ಕ ರೂ. 750—12—0 ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ VIIನೆ ನಂಬರ್ ರೆಗ್ಯುಲೇಷನ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸ॥ 1904ನೆ ಇಸವಿ ನವೆಂಬರ್ ತಿಂಗಳು ತಾರೀಖು 11ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿವರ್ಸೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೃಷ್ಣಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ॥ 1904ನೆ ಇಸವಿ ಅಕ್ಟೋಬರ್ ತಿಂಗಳು 3ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನನ್ನು ದಸ್ತಖತ್ತೊಡನೆ ಕೊಡೋ ಹಾಗಿದೆ.

ಎಸ್. ವೆಂಕಟವರದ ಐಯ್ಯಂಗಾರಿ,
ಡಿಸ್ಟ್ರಿಕ್ಟ್ ಜಡ್ಜ್.

ಎಡೆಪಳ್ಳಿ ಸಬ್ ಡಿವೀಜ್ಯ ಮ್ಯುನಿಸೀಫರವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರಿ ಜೇಣೇದಾರ ಎಡೆಪಳ್ಳಿ ಸಬ್ ತಾಲ್ಲೂಕ್ ಕುದುರುಗುಂಡಿ ಪೊಲೀಸ್ ಜವಾನ ಕಾರಬೈಲ್ ಲಿಂಗೋಜಿ ವಿಷಯದಲ್ಲಿ—

ಸ॥1903—04ನೆ ಇಸವಿ ದಿವಾಳಿ ಕೇಸ್ ನಂ. 270.

ಹುಕುಂ.

ಮೇಲ್ಕಂಡ ಕಾರಬೈಲ್ ಲಿಂಗೋಜಿಯು ನಿರ್ಬಂಧದಿಂದ ಖುಲಾಸೆ ಯಾಗಬೇಕೆಂದು ಕೊಟ್ಟ ಅರ್ಜಿ ಅಂಕನ್ನು ಮ್ಯುನಿಸೀಫ್ ಎ॥ ನರಸಿಂಹ ಅಯ್ಯಂಗಾರ್, ಎಸ್ಕ್ವೈಯರ್ ಯವರ ರೂಬರೂ ಅರ್ಜೀದಾರರಾದ ಕಾರಬೈಲು ಲಿಂಗೋಜಿಯು ಸದರಿ ಯವರ ಲೇಣೆದಾರರಾದ 1ನೆ ಕೂತಗೋಡು ಕೃಷ್ಣಭಟ್ಟರು, 2ನೆ ಕೂತುಗೋಡು ಲಕ್ಷ್ಮಿನಾರಾಯಣಭಟ್ಟರು ಇವರುಗಳ ತರಫಿನ ಪ್ಲೀಡರ್ ಪೆ॥ ಶೇಷಾಚಲೈಯ್ಯನವರು ಇವರಿಗೂ ದರ್ಖಾಸ್ತು ಮಾಡಲ್ಪಟ್ಟಿತು. ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರರು ತಮಗೆ ಈ ದರ್ಖಾಸ್ತು ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗ್ಲವದಕ್ಕೆ ತಪ್ಪುಹೋದರು ಯಾರೆಂದರೆ—3ನೆ ಜಮ್ಮಟಿಗೆ ವಿಶ್ವೇಶ್ವರಭಟ್ಟ, 4ನೆ ವರಗಳೆ ವೆಂಕಟಾಚಲೈಯ್ಯ ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೆ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರಿ ಕಾರಬೈಲ್ ಲಿಂಗೋಜಿಯವರು ಹೊಂದುವದಕ್ಕೆ ಹಕ್ಕುದಾರರಾಗುವದರ ಮೂಲಕ ದಿವಾಳಿಯಾದವರೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರಿ ದಿವಾಳಿಯಾದವನನ್ನು ನಿರ್ಬಂಧದಿಂದ ವಿಸೋಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿ ಯಾಗಲಿ ವಸ್ತುಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವರನ್ನು ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸ್ ಸ 1904ನೆ ಇಸವಿ ಸಪ್ಟೆಂಬರ ತಿಂಗಳು 21ನೆ ತಾರೀಖಿನಲ್ಲಿ ಈ ಕೋರ್ಟು ಮೊಹರು ನಮ್ಮ ದಸ್ತಖತ್ತೊಡನೆ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರು	ಲೇವಡಿದಾರರು ಅಥವಾ ದಾವಾದಾರರ ಹೆಸರು ಮತ್ತು ವಿವರ ಮತ್ತು ಪಾಲಿ ತಿಳಿಯುವಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ದೇಣಿ ಉಂಟಾದದ್ದು.	ದೇಣಿ ಸ್ವೀಕರಿಸಿದ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಪದಾರ್ಥ ಇದ್ದರೆ.
		ರೂ. ಆ. ಪೈ.		
1	ಕೂತುಗೋಡು ಕೃಷ್ಣಭಟ್ಟ ...	98 0 0	.	ಡಿಕ್ರಿ ಬಾಬತ್ತು.
2	ಕೂತುಗೋಡು ಲಕ್ಷ್ಮೀನಾರಾಯಣಭಟ್ಟ ...	ಜಿಲ್ಲರೆ		
3	ಜವಳಿಗೆ ವಿಶ್ವೇಶ್ವರ ಭಟ್ಟ ..	400 0 0	...	ಲಿಖಿತದ ಬಾಕಿ.
		ಜಿಲ್ಲರೆ		
4	ವಗಳೆ ವೆಂಕಟಾಚಲಯ್ಯ ..	15 0 0	...	ಪ್ರಾಮನೋಟು.
	ಜುಮ್ಲಾ ...	513 0 0		

ಎ. ನರಸಿಂಹ ಐಯ್ಯಂಗಾರ್,
ಮ್ಯೂನಸೀಫ್.

ಕ್ರಯಸಿದ್ಧ ಪತ್ರಿಕೆ.

ತಾರೀಖು 28ನೆ ಅಕ್ಟೋಬರ ಮಾಹೆ 1904ನೆ ಇಸವಿ.

I. ಹಾಸನ ಡಿವೀರ್ಜ ಫೈಜರ್‌ಪೇಟೆ ರಾಮನಾಥಪುರದ ರಸ್ತೆಯಲ್ಲಿ ಕಟ್ಟುವ ಸೇತುವೆ ಕಾಮಗಾರಿ ಉದ್ದಿಕ್ಕೆ ನೆ ಇಸವಿ ಮಾಹೆ ನೆ ತಾರೀಖು ಪರಿಯಂತರ ದರಖಾಸ್ತುಗಳು ಹಾಸನ ಡಿವಿರ್ಜ ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೇಬರ ವರಿಂದ ತೆಗದುಕೊಳ್ಳಲ್ಪಡುತ್ತವೆ. ಈ ಕೆಳಗೆ ಕಂಡ ಅಂದಾಜಿನಲ್ಲಿನ ಐಟಂಗಳ ಮೊತ್ತವನ್ನು ಕಾಣಿಸಲ್ಪಟ್ಟಿರುತ್ತದೆ. ಇದು ನಿಷ್ಕರ್ಷೆಯಾದದ್ದಾಗಿರಬೇಕೆಂದಿಲ್ಲ. ಕಾಮಗಾರಿಯು ನೆ ಇಸವಿ ತಿಂಗಳು ಆಖೈರೊಳಗಾಗಿ ಪೂರೈಸತಕ್ಕದ್ದು.

II. ಪ್ಲಾನು ಮತ್ತು ಅಂದಾಜು ಪತ್ರಕ್ಕು ವಗೈರೆ ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೇಬರವರ ಆಫೀಸಿನಲ್ಲಿ ಪ್ರತಿಕಾಲ 11 ಘಂಟೆ ಲಾಗಾಯಿತು ಸಾಯಂಕಾಲ 4 ಗಂಟೆ ಪರಿಯಿಗೆ ನೋಡಲು ಅವಕಾಶ ಕೊಡಲ್ಪಡುತ್ತೆ.

III. ದರಖಾಸ್ತುಗಳು ಅಚ್ಚು ಹಾಕಿದ ಫಾರಂನಲ್ಲಿ ಬರಿಯಬೇಕು. ಈ ಫಾರಂಗಳು ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೇಬರವರ ಆಫೀಸಿನಲ್ಲಿ ದೊರೆಯುತ್ತವೆ ಈ ಕೆಳಗೆ ಕಾಣಿಸಲ್ಪಟ್ಟಿರುವ ಸ್ಪೆಸಿಫಿಕೇಶನ್ ಪ್ರಕಾರ ಬಂದು ಸ್ಪೆಸಿಫಿಕೇಶನ್ ಲಗತ್ತು ಮಾಡಿರಬೇಕು. ಅದರಲ್ಲಿ ಕಂಟ್ರಾಕ್ಟುದಾರನು ಯಾವ ರೀತಿ ಪ್ರಕಾರ ಪ್ರತಿ ಐಟಂಗಳ ಕೆಲಸವನ್ನು ಮಾಡಿಸಬಲ್ಲನೋ ಆ ರೇಟನ್ನು ಅಥವಾ ಆ ದರವನ್ನು ನಮೂದು ಮಾಡಬೇಕು.

ಫಾರಂ.

ಕೆಲಸದ ವಿವರ.	ಕೆ.	ಮೊತ್ತ.	ಕಂಟ್ರಾಕ್ಟುದಾರ ಕೆಲಸ ಮಾಡಿಸುವದಕ್ಕೆ ತಪ್ಪುವ ದರ.
ಮಣ್ಣು ಕೆಲಸ ..	ಸಲಿಗೆ 1ಕ್ಕೆ.	16,000.	
ಕಲ್ಲು ಕೆಲಸ.			

IV. ಪ್ರತಿ ಒಂದು ದರಖಾಸ್ತಿನ ಸಂಗಡಲು 50 ರೂಪಾಯಿಗಳ ಕರ್ನಾಟಕ ನೋಟುಗಳಾಗಲಿ, ಗವರ್ನಮೆಂಟ್ ಪ್ರಾಮಿಸರಿ ನೋಟಿನಲ್ಲಿ ಅಥವಾ ನಗದಾಗಲಿ ಡಿವಾಜಿಟ್ ಹಣವನ್ನು ತೇಸಂಖಾತಿಯಾಗಿ ಹಾಜರ್ಮಾಡಿಸಬೇಕು, ಮತ್ತು ಲಕೋಟೆ ಮೇಲೆ ಹಾಸನ ಡಿವೀರ್ಜ ಫೈಜರ್‌ಪೇಟೆ ರಾಮನಾಥಪುರದ ರಸ್ತೆಯಲ್ಲಿ ಕಟ್ಟುವ ಸೇತುವೆ ಕಾಮಗಾರಿ ಬಗ್ಗೆ ದರಖಾಸ್ತೆಂಬದಾಗಿ ಬರಿಯಬೇಕು, ತಪ್ಪಿದಲ್ಲಿ ಅಂಥಾ ದರಖಾಸ್ತುಗಳನ್ನು ತಿರಸ್ಕರಿಸಲಾಗುತ್ತದೆ.